**ಹೆಚ್ಚುವರಿ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ , ಅಂಕೋಲಾ.**

**ಸಿಸಿ ನಂಬರ 587/2024**

**ಪಿರ್ಯಾದಿಃ** **ಸರಕಾರ**

**-ವಿರುದ್ಧ -**

**ಆರೋಪಿ:** ಮೋಹನ ತಂ. ಶಂಕರ ದೇಶಭಂಡಾರಿ,
ಪ್ರಾಯಃ 45 ವರ್ಷ, ಉಃ ಕೆಎಸ್‌ಆರ್ ಟಿಸಿ ಚಾಲಕ
ಸಾಃ ಬ್ಯಾಚ್ ನಂ. 1633 ಸಿ, ಕುಮಟಾ ಡಿಪೋ,
ಸಾಃ ಧಾರೇಶ್ವರ, ತಾಃ ಕುಮಟಾ

**ಆಪಾದನೆ**

ದಿನಾಂಕಃ 09-02-2024 ರಂದು ಬೆಳಿಗ್ಗೆ 9-15 ಗಂಟೆಗೆ ಅಂಕೋಲಾ ಪೊಲೀಸ ಠಾಣಾ ವ್ಯಾಪ್ತಿಯಲ್ಲಿ ಬರುವ ಅಂಕೋಲಾ ತಾಲೂಕಿನ ಅಜ್ಜಿಕಟ್ಟಾದಲ್ಲಿ ಹಾಯ್ದಿರುವ ಕಾರವಾರ -ಅಂಕೋಲಾ ಕಾಂಕ್ರೀಟ್ ರಸ್ತೆಯಲ್ಲಿ ಆರೋಪಿಯಾದ ನೀವು ಇಚರ್ ಕಂಪನಿಯ ಕೆಎಸ್‌ಆರ್ ಟಿ ಸಿ ಬಸ್ಸ ನಂ. ಕೆಎ-31/ಎಫ್-1566 ನೇದನ್ನು ಕಾರವಾರ ಕಡೆಯಿಂದ ಅಂಕೋಲಾ ಕಡೆಗೆ ಅತೀವೇಗ ಮತ್ತು ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಹೋಗಿ ಅಜ್ಜಿಕಟ್ಟಾ ಕ್ರಿಸ್ತಮಿತ್ರ ಆಶ್ರಮದ ಎದುರು ಬಸ್ಸಿನ ಮುಂದುಗಡೆ ಚಾಸಾ -6 ರವೀಂದ್ರ ನಾಗಪ್ಪ ನಾಯ್ಕ ಇವರು ರಸ್ತೆಯ ತಮ್ಮ ಬದಿಯಿಂದ ಅಜ್ಜಿಕಟ್ಟಾದಿಂದ ಅಂಕೋಲಾ ಕಡೆಗೆ ಸವಾರಿ ಮಾಡಿಕೊಂಡು ಹೋಗುತ್ತಿದ್ದ ಹಿರೋ ಸ್ಪ್ಲೆಂಡರ್ ಪ್ಲಸ್ ಕಂಪನಿಯ ಮೋಟಾರ್ ಸೈಕಲ್ ನಂ. ಕೆಎ-30/ಡಬ್ಲ್ಯು-1580 ನೇದಕ್ಕೆ ನಿರ್ಲಕ್ಷತನದಿಂದ ಓವರಟೇಕ್ ಮಾಡಲು ಹೋಗಿ ಬಸ್ಸಿನ ಎಡಭಾಗದಿಂದ ಮೋಟಾರ್ ಸೈಕಲ್ಲಿನ ಬಲಭಾಗಕ್ಕೆ ಡಿಕ್ಕಿ ಹೊಡೆದು ಅಪಘಾತಪಡಿಸಿ, ಆ ಮೂಲಕ ಭಾ. ದಂ. ಸಂ. ಕಲಂ 279 ರಡಿಯಲ್ಲಿ ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಅಪರಾಧ ಮಾಡಿರುತ್ತೀರಾ ಅಂತಾ ನಿಮ್ಮ ಮೇಲೆ ಆಪಾದನೆ ಇರುತ್ತದೆ.

ಎರಡನೇಯದಾಗಿ, ಅದೇ ದಿನ, ಸ್ಥಳ ಮತ್ತು ಸಮಯದಂದು ಆರೋಪಿಯಾದ ನೀವು ಅಪಘಾತಪಡಿಸಿ ಮೋಟಾರ್ ಸೈಕಲ್ ಸವಾರ, ಹಿಂಬದಿ ಸವಾರರಿಗೆ ಮೋಟಾರ್

ಸೈಕಲ್ ಸಮೇತ ರಸ್ತೆಯಲ್ಲಿ ಬೀಳಿಸಿ ಮೋಟಾರ್ ಸೈಕಲ್ ಸವಾರ ರವೀಂದ್ರ ನಾಗಪ್ಪ ನಾಯ್ಕ ಇವರಿಗೆ ತಲೆಗೆ, ಮೈಕೈಗೆ ಗಂಭೀರ ಸ್ವರೂಪದ ಗಾಯನೋವುಪಡಿಸಿ ಆ ಮೂಲಕ ಭಾ. ದಂ. ಸಂ. ಕಲಂ. 338 ರಡಿಯಲ್ಲಿ ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಅಪರಾಧ ಮಾಡಿರುತ್ತೀರಾ ಅಂತಾ ನಿನ್ನ ಮೇಲೆ ಆಪಾದನೆ ಇರುತ್ತದೆ.

ಮೂರನೇಯದಾಗಿ, ಅದೇ ದಿನ, ಸ್ಥಳ ಮತ್ತು ಸಮಯದಂದು ಆರೋಪಿಯಾದ ನೀವು ಅಪಘಾತಪಡಿಸಿ ಹಿಂಬದಿ ಸವಾರರಾದ ಫಿರ್ಯಾದಿ ಶಂಕರ ವೆಂಕಪ್ಪ ನಾಯ್ಕ ಇವರಿಗೆ ಬಲಕೈಗೆ, ಎರಡು ಕಾಲಿಗೆ, ಮುಖಕ್ಕೆ ಹಾಗೂ ಮೈಮೇಲೆ ಅಲ್ಲಲ್ಲಿ ಸಾದಾ ಸ್ವರೂಪದ ಗಾಯನೋವುಪಡಿಸಿ ಆ ಮೂಲಕ ಭಾ. ದಂ. ಸಂ. ಕಲಂ. 337 ರಡಿಯಲ್ಲಿ ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಅಪರಾಧ ಮಾಡಿರುತ್ತೀರಾ ಅಂತಾ ನಿಮ್ಮ ಮೇಲೆ ಆಪಾದನೆ ಇರುತ್ತದೆ.

ನಾಲ್ಕನೇಯದಾಗಿ, ಅದೇ ದಿನ, ಸ್ಥಳ ಮತ್ತು ಸಮಯದಂದು ಆರೋಪಿಯಾದ ನೀವು ಅಪಘಾತಪಡಿಸಿ ಸ್ಥಳದಲ್ಲಿ ಬಸ್ಸ ನಿಲ್ಲಿಸದೇ ವೇಗವಾಗಿ ಚಲಾಯಿಸಿಕೊಂಡು ಹೋಗಿ ಆ ಮೂಲಕ ಕಲಂ. 187 ಎಮ್.ವಿ.ಎಕ್ಟ ರಡಿಯಲ್ಲಿ ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಅಪರಾಧ ಮಾಡಿರುತ್ತೀರಾ ಅಂತಾ ನಿಮ್ಮ ಮೇಲೆ ಆಪಾದನೆ ಇರುತ್ತದೆ.

ಪ್ರಶ್ನೆಃ 1 ನಿಮಗೆ ಓದಿ ಹೇಳಿದ ಆಪಾದನೆಯನ್ನು ಕೇಳಿದಿರಾ, ಅದು ನಿಮಗೆ ಅರ್ಥವಾಯಿತೇ?

ಉತ್ತರಃ

ಪ್ರಶ್ನೆಃ 2 ಈ ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ಇದಕ್ಕೆ ನಿನ್ನ ಪ್ರತಿವಾದ ಇದೆಯೇ?
ಉತ್ತರಃ

( ಮೇಲಿನ ಆಪಾದನೆಯನ್ನು ಆರೋಪಿಗೆ ಓದಿ ಹೇಳಿ ತಿಳಿಸಿ ಆತನು ಕೊಟ್ಟ ಉತ್ತರವನ್ನು ಬರೆದುಕೊಳ್ಳಲಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.)

Sd/-

ದಿನಾಂಕಃ **(ಅರ್ಪಿತಾ ಬಿ. ಬೆಲ್ಲದ್)**

ಅಂಕೋಲಾ 10-01-2025 **ಹೆ. ಪ್ರ ದ ನ್ಯಾದಂ, ಅಂಕೋಲಾ.**

ಆರೋಪಿಯ ಸಹಿ.